# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 107 | Pages. 2 | Date: 29-03-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 107 – ಪುಟಗಳು : 2 | 29-03-2026 | ಭಾನುವಾರ | Ph: 8762954248 | ದರ : ₹1


# ಬೆಟ್ಟದ ಭೈರವೇಶ್ವರ ದೇಗುಲಕ್ಕೆ ಭದ್ರತಾ ಸಿಬ್ಬಂದಿ

## ಛಾಯಾಗ್ರಾಹಕರ ಮೇಲೆ ಹಲ್ಲೆ ಬಳಿಕ ಎಚ್ಚೆತ್ತ ಆಡಳಿತ | ಮಾ. 31ಕ್ಕೆ ರಾಜ್ಯಾದ್ಯಂತ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಕಲೇಶಪುರ ತಾಲೂಕಿನ ಬೆಟ್ಟದ ಭೈರವೇಶ್ವರ ದೇಗುಲದಲ್ಲಿ ಶುಕ್ರವಾರ ಛಾಯಾಗ್ರಾಹಕರು ಹಾಗೂ ಸ್ಥಳೀಯರ ನಡುವೆ ನಡೆದ ಗಲಾಟೆ ಗಂಭೀರ ಸ್ವರೂಪ ಪಡೆದಿದ್ದು ದೇವಾಲಯದಲ್ಲಿ ಖಾಯಂ ಭದ್ರತಾ ಸಿಬ್ಬಂದಿ ನಿಯೋಜಿಸಲು ಚಿಂತನೆ ನಡೆದಿದೆ.

ಪ್ರೀ ವೆಡ್ಡಿಂಗ್ ಶೂಟ್‌ಗಾಗಿ ಬಂದಿದ್ದ ಛಾಯಾಗ್ರಾಹಕರ ಮೇಲೆ ನಡೆದ ಹಲ್ಲೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಛಾಯಾಗ್ರಾಹಕರ ಸಂಘ ಮಾ. 31ರ ಮಂಗಳವಾರ ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ ನೀಡಿದೆ. ವಿಚಾರವನ್ನು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರ ಗಮನಕ್ಕೂ ತರಲಾಗಿದೆ. ಜೊತೆಗೆ ಸ್ಥಳೀಯ ಶಾಸಕ ಸಿಮೆಂಟ್ ಮಂಜು ಅವರು ಮಂಗಳವಾರ ಅಧಿಕಾರಗಳ ಸಭೆ ನಡೆಸಲಿದ್ದು, ದೇವಾಲಯದಲ್ಲಿ ಪ್ರೀ ವೆಡ್ಡಿಂಗ್ ಸೇರಿದಂತೆ ಎಲ್ಲಾ ಬಗೆಯ ಚಿತ್ರೀಕರಣಕ್ಕೆ ಕಡಿವಾಣ ಹಾಕಲಾಗುತ್ತದೆ ಎನ್ನಲಾಗಿದೆ.

### ಶಾಂತಿಯುತ ಪ್ರತಿಭಟನೆ

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ರಾಜ್ಯ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಎಚ್.ಎಸ್.ನಾಗೇಶ್ ಅವರು, ನಮ್ಮವರ ಮೇಲಿನ ಹಲ್ಲೆ ಘಟನೆ ಖಂಡಿಸಿ ಮಾ.31 ರಂದು ಬೆಳಗ್ಗೆ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಹಾಗೆಯೇ ರಾಜ್ಯದ ಎಲ್ಲ ತಾಲೂಕು ಕಚೇರಿಗಳ ಮುಂದೆಯೂ ಛಾಯಾಗ್ರಾಹಕರು ಶಾಂತಿಯುತ ಧರಣಿ ಪ್ರತಿಭಟನೆ ನಡೆಸಲಿದ್ದಾರೆ ಎಂದರು.

ಅಂದಿನ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲಾ ಛಾಯಾ ಚಿತ್ರಗ್ರಾಹಕರು, ಸಂಘದ ಎಲ್ಲ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗಿಯಾಗಲಿದ್ದಾರೆ. ಮೆರವಣಿಗೆ ನಂತರ ಡಿಸಿ, ಎಸ್ಪಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಪ್ರೀ ವೆಡ್ಡಿಂಗ್ ಶೂಟಿಂಗ್‌ನಲ್ಲಿ ತೊಡಗಿದ್ದ ಹಾಸನ ಮತ್ತು ಬೆಂಗಳೂರಿನ ಒಟ್ಟು 6 ಮಂದಿ ನಮ್ಮ ಛಾಯಾಗ್ರಾಹಕರ ಮೇಲೆ ಸ್ಥಳೀಯರು ಗಂಭೀರ ಹಲ್ಲೆ ನಡೆಸಿರುವುದು ದುರದೃಷ್ಟಕರ, ವಿಷಾದನೀಯ, ನಾವೆಲ್ಲರೂ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದರು.




> ಸಕಲೇಶಪುರದವರು ಎಂದರೆ ಅತ್ಯಂತ ಸೌಮ್ಯ ಸ್ವಭಾವದವರು ಎಂಬ ಮಾತಿದೆ. ಆದರೆ ಶುಕ್ರವಾರದ ಘಟನೆ ನೋವು ತರಿಸಿದೆ. ಛಾಯಾಗ್ರಾಹಕರು ತಪ್ಪು ಮಾಡಿದ್ದರೆ ಗ್ರಾಮಸ್ಥರು ಬುದ್ಧಿ ಹೇಳಿ ಕಳುಹಿಸಬಹುದಿತ್ತು. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕಿದೆ.
>
> **– ಯಡೇಹಳ್ಳಿ ಮಂಜುನಾಥ್, ಚಿಂತಕ**

ನಾವೂ ಕೂಡ ಸರ್ಕಾರಕ್ಕೆ ತೆರಿಗೆ ಕಟ್ಟುತ್ತೇವೆ. ಮದುವೆ ಮಾತ್ರವಲ್ಲದೆ ಎಲ್ಲ ಕ್ಷೇತ್ರದಲ್ಲೂ ಕೆಲಸ ಮಾಡುತ್ತಿದ್ದಾರೆ. ಅವರು ಹಾಗೆ ವರ್ತಿಸುವ ಮುನ್ನ ಕುಳಿತು ಮಾತನಾಡಬಹುದಿತ್ತು ಎಂದರು.

ಸ್ಥಳೀಯರ ದೌರ್ಜನ್ಯದಿಂದ ಸುಮಾರು 5 ಲಕ್ಷಕ್ಕೂ ಅಧಿಕ ಮೌಲ್ಯದ ಕ್ಯಾಮೆರಾ, ಲೆನ್ಸ್ ಹಾನಿಯಾಗಿವೆ ಎಂದರು.

ನಮ್ಮವರ ಮೇಲೆ ಹಲ್ಲೆ ಮಾಡಿ ಗೂಂಡಾ ವರ್ತನೆ ತೋರಿದ ಎಲ್ಲರನ್ನೂ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು, ಛಾಯಾಗ್ರಾಹಕರಿಗೆ ಆಗಿರುವ ನಷ್ಟವನ್ನು ಭರಿಸಿಕೊಡಬೇಕು. ಸರ್ಕಾರ ವೃತ್ತಿಪರ ಛಾಯಾಗ್ರಾಹಕರಿಗೆ ರಕ್ಷಣೆ ಹಾಗೂ ನ್ಯಾಯ ಒದಗಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ನ್ಯಾಯ ಸಮ್ಮತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಘದ ಅಧ್ಯಕ್ಷ ಸ್ವಾಮಿ, ಮಾಜಿ ಅಧ್ಯಕ್ಷ ನಿಂಗರಾಜು, ಪ್ರಧಾನ ಕಾರ್ಯದರ್ಶಿ ಬಿ.ಕೆ.ಧರ್ಮಶೆಟ್ಟಿ, ಕಾರ್ಯದರ್ಶಿ ಟಿ.ಸಿ.ನಾಗರಾಜ್, ತುಮಕೂರು ಜಿಲ್ಲಾ ಸಂಘದ ಅಧ್ಯಕ್ಷ ಅನಿಲ್‌ಕುಮಾರ್ ಇದ್ದರು.

### ಹಲ್ಲೆ ನಡೆಸಿದ ಏಳು ಜನರ ಬಂಧನ

ಹಲ್ಲೆಗೊಳಗಾಗಿರುವವರ ಪೈಕಿ ಚೇತನ್ ಎಂಬ ಫೋಟೋಗ್ರಾಫರ್ ಐಸಿಯೂನಲ್ಲಿದ್ದಾನೆ. ನವೀನ್, ರವಿನಂದನ್, ಯಶ್, ಅಭಿಷೇಕ್, ಯಶವಂತ್, ಸೋಮಶೇಖರ್ ಮೇಲೆ ಹಲ್ಲೆ ಮಾಡಲಾಗಿದೆ. ಅಕಸ್ಮಾತ್ ಹೆಚ್ಚು ಕಡಿಮೆ ಆಗಿದ್ದರೆ ಯಾರು ಹೊಣೆ ಎಂದು ಪ್ರಶ್ನಿಸಿದ ನಾಗೇಶ್, ಹಲ್ಲೆ ಮಾಡಿರುವ ಅಭಿ,ಪ್ರಶಾಂತ್, ರಕ್ಷ, ಅರವಿಂದ್, ಉಚಿತ್, ಪ್ರಜ್ವಲ್, ನಿಶಾಂತ್ ಎಂಬುವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಆರೋಪಿಗಳನ್ನು ಸಕಲೇಶಪುರ ಗ್ರಾಮಾಂತರ ಠಾಣೆ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.



### ಸಾರ್ವಜನಿಕರ ಹಿತದೃಷ್ಟಿಯಿಂದ ಸೂಕ್ತ ಕ್ರಮ: ಭರವಸೆ

ಬೆಟ್ಟದ ಭೈರವೇಶ್ವರ ದೇಗುಲ ಊರಿನಿಂದ ದೂರ ಇರುವುದರಿಂದ ಜನರ ಓಡಾಟ ಕಡಿಮೆ ಇರುತ್ತದೆ. ಅರ್ಚಕರು ಬೆಳಿಗ್ಗೆ ಪೂಜೆ ಮುಗಿಸಿಕೊಂಡು ವಾಪಾಸ್ ಬಂದರೆ ಯಾರೂ ಇರುವುದಿಲ್ಲ.

ಪ್ರವಾಸಿಗರಷ್ಟೇ ಅಲ್ಲಿರುವುದರಿಂದ ಸೂಕ್ತ ಭದ್ರತೆ ಕಲ್ಪಿಸುವ ಅಗತ್ಯತೆ ಇದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದ್ದಾರೆ.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಶುಕ್ರವಾರ ನಡೆದ ಗಲಾಟೆ ವಿಚಾರ ತಿಳಿದು ನೋವಾಯಿತು. ಸಾಲು ಸಾಲು ರಜೆ ಇರುವುದರಿಂದ ಅಧಿಕಾರಿಗಳ ಸಭೆ ಮಾಡಲು ಸಾಧ್ಯವಾಗಿಲ್ಲ. ಮಂಗಳವಾರ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಸಮ್ಮುಖದಲ್ಲಿ ಸಭೆ ನಡೆಸಿ ಸಾರ್ವಜನಿಕರು ಹಾಗೂ ಸ್ಥಳೀಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ದೇವಾಲಯಕ್ಕೆ ಖಾಯಂ ಭದ್ರತಾ ಸಿಬ್ಬಂದಿ ನಿಯೋಜಿಸಬೇಕೆಂದು ನಿರ್ಧರಿಸಿದ್ದು ಆ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

# ಚ.ರಾ.ಪಟ್ಟಣದಲ್ಲಿ ಏ. 5ರಂದು ಯೋಗ ತರಬೇತಿ ಕೇಂದ್ರ ಆರಂಭ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಪತ್ರಕರ್ತರ ಭವನದಲ್ಲಿ ಏ. 5 ರಂದು ಯೋಗ ತರಬೇತಿ ಕೇಂದ್ರ ಆರಂಭಿಸಲಾಗುವುದೆಂದು ಸ್ನೇಹಮಯಿ ವಿವೇಕಾನಂದ ಯೋಗ ಮಂದಿರದ ಮಂಜುನಾಥ್ ಕೆ. ಅಡಗೂರು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಶನಿವಾರ ಮಾತನಾಡಿದ ಅವರು, ನಿತ್ಯ ಜೀವನದಲ್ಲಿ ಯೋಗ ಹಾಗೂ ಧ್ಯಾನವನ್ನು ಅಳವಡಿಸಿಕೊಂಡರೆ ದೈಹಿಕ ಹಾಗೂ ಮಾನಸಿಕ ಸಮತೋಲನ ಸಾಧಿಸುವುದರ ಜೊತೆಗೆ ಸದೃಢ ಆರೋಗ್ಯ ಹೊಂದಬಹುದು. ಯೋಗ ಮತ್ತು ಧ್ಯಾನಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನಮಾನವಿದೆ ಎಂದರು.

ಈಗಾಗಲೇ ನೋಂದಣಿ ಕಾರ್ಯ ಪ್ರಾರಂಭಗೊಂಡಿದ್ದು ತಲಾ ಒಬ್ಬರಿಗೆ ತಿಂಗಳಿಗೆ 600 ರೂ. ಸೇವಾ ಶುಲ್ಕ ನಿಗದಿ ಮಾಡಲಾಗಿದೆ. ವಾರದಲ್ಲಿ 5 ದಿನ ಬೆಳಿಗ್ಗೆ ಹಾಗು ಸಂಜೆ 1 ಗಂಟೆ ಯೋಗ ತರಬೇತಿ ನೀಡಲಾಗುವುದು. ಮಕ್ಕಳಿಗಷ್ಟೇ ಅಲ್ಲದೆ ದೊಡ್ಡವರಿಗೂ ಅವಕಾಶವಿದೆ ಎಂದು ಮಾಹಿತಿ ನೀಡಿದರು.

ಉದ್ಘಾಟನಾ ಸಮಾರಂಭದಲ್ಲಿ ಪರಿಸರ ಪ್ರೇಮಿ ಸಿ.ಎನ್.ಅಶೋಕ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಸಿ.ಎನ್ .ಬಾಲಕೃಷ್ಣ ಉದ್ಘಾಟಿಸಲಿದ್ದಾರೆ. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ ಕೋಟೆ ಮೋಹನ್, ಸದಸ್ಯರಾದ ಟಿವಿಎಸ್ ಶಶಿಧರ್, ಗಣೇಶ್, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್ ಪಾಲ್ಗೊಳ್ಳಲಿದ್ದಾರೆ ಎಂದರು.

ಅಂತಾರಾಷ್ಟ್ರೀಯ ಯೋಗ ತರಬೇತುದಾರರಾದ ಡಾ. ಕೆ.ಆರ್ .ನವೀನ್ ಕುಮಾರ್, ಕಿಶೋರ್ ಬೆಳ್ಳೂರು, ರಾಜ್ಯ ಮಟ್ಟದ ಯೋಗ ಪಟು ವಿಸ್ಮಿತ ಶೆಟ್ಟಿಹಳ್ಳಿ, ಹಾಸನ ಹಸಿರು ಸೇನೆ ರೈತ ಸಂಘದ ಅಧ್ಯಕ್ಷೆ ಡಾ. ತಾರಾವತಿ ಇದ್ದರು.

# ವೈಭವದ ಹುಲಿಕೆರಮ್ಮ ಜಾತ್ರಾ ಮಹೋತ್ಸವಕ್ಕೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ಗೌಡಗೆರೆ ಗ್ರಾಮ ದೇವತೆ ಹುಲಿಕೆರಮ್ಮ ದೇವಿಯ ಜಾತ್ರಾ ಮಹೋತ್ಸವ ಪ್ರಾರಂಭಗೊಂಡಿದ್ದು, ಏ.1ರ ಬುಧವಾರದ ವರೆಗೆ ಜರುಗಲಿದೆ.

ಮಾ.28ರ ಶನಿವಾರ ಬೆಳಿಗ್ಗೆ ದೇಗುಲಕ್ಕೆ ಹಸಿರು ಚಪ್ಪರ ಹಾಕಲಾಗಿದ್ದು ತಳಿರು ತೋರಣಗಳಿಂದ ಸಿಂಗರಿಸಲಾಯಿತು.

ಶ್ರೀಕ್ಷೇತ್ರದ ಧರ್ಮದರ್ಶಿ ದೊರೆಸ್ವಾಮಿ ಅವರ ಸಾನ್ನಿಧ್ಯದಲ್ಲಿ ವಿಘ್ನೇಶ್ವರ ಹಾಗು ಗಂಗಾ ಪೂಜೆಯೊಂದಿಗೆ ಜಾತ್ರಾ ಮಹೋತ್ಸವ ಹಾಗು 18ನೇ ವರ್ಷದ ಕೊಂಡೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀ ಆದಿಶಕ್ತಿ ಹುಲಿಕೆರಮ್ಮ, ಚಂಡಿ ಮಾಯಮ್ಮ, ದುರ್ಗಾ ಮಾಯಮ್ಮ ದೇವಿಗೆ ವಿಶೇಷ ಅಲಂಕಾರ ಹಾಗೂ ವಿವಿಧ ಪೂಜಾ ವಿಧಿ ವಿಧಾನಗಳು ನೆರವೇರಲಿವೆ. ಮಾ.29ರ ಭಾನುವಾರ ಸಂಜೆ ದೇವಿಯ ಅಡ್ಡಪಲ್ಲಕ್ಕಿ ಉತ್ಸವದೊಂದಿಗೆ ಸೋಮನ ಕುಣಿತ ಜರುಗಲಿದೆ. ಮಾ.30ರ ಸೋಮವಾರ ವಿಶೇಷ ಪೂಜೆಗಳೊಂದಿಗೆ ಸಂಜೆ 7 ಗಂಟೆಗೆ ಶೈಲಜಾ ಕುಮಾರ್ ಅವರ ನೃತ್ಯಾಂಜಲಿ ಕಲಾನಿಕೇತನ ವತಿಯಿಂದ ಭರತನಾಟ್ಯ ಕಾರ್ಯಕ್ರಮ ಆಯೋಜಿಸಲಾಗಿದೆ.



ಮಾ.31ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ವಡ್ಡರಹಳ್ಳಿ ಶ್ರೀ ವೆಂಕಟೇಶ್ವರಸ್ವಾಮಿ, ರಾಗಿಬೊಮ್ಮೇನಹಳ್ಳಿ ಶ್ರೀ ಲಕ್ಷ್ಮಿದೇವಿ, ಕೋಡಿಬೆಳಗುಳದ ಶ್ರೀ ಸತ್ಯಮ್ಮ, ಚನ್ನರಾಯಪಟ್ಟಣದ ಶ್ರೀ ಭದ್ರಕಾಳಿ, ಶ್ರೀ ಪಿರಿಯಾಪಟ್ಟಣದವ್ವ, ಹಳೆಬೆಳಗುಳದ ಶ್ರೀ ಭೂತಪ್ಪ, ಗೌಡಗೆರೆ ಶ್ರೀ ಶೆಟ್ಟಿಲ್ಲಮ್ಮ, ಶ್ರೀ ಬೀರಲಿಂಗೇಶ್ವರ ಸ್ವಾಮಿ, ಶ್ರೀ ಚಿಕ್ಕಮ್ಮ ಮತ್ತು ಶ್ರೀ ಭೈರವೇಶ್ವರಸ್ವಾಮಿ, ಶ್ರವಣಬೆಳಗೊಳ ಶ್ರೀ ರುದ್ರಪ್ರತಾಪ ಆಂಜನೇಯ ಸ್ವಾಮಿ, ಗೂಳಿಹೊನ್ನೇನಹಳ್ಳಿ ಶ್ರೀ ವೀರಭದ್ರ ಸ್ವಾಮಿ, ಶ್ರೀ ಭದ್ರಕಾಳೇಶ್ವರಿ ಹಾಗು ಗವಿರಂಗ ಕೆಂಚರಾಯಸ್ವಾಮಿ ದೇವತೆಗಳು ಆಲಯ ಪ್ರವೇಶ ಮಾಡಲಿವೆ.

ಅಂದು ಮಧ್ಯಾಹ್ನ 12 ಗಂಟೆಗೆ ಎಂ.ಶಿವರ ಗ್ರಾಮದ ಶ್ರೀ ದ್ಯಾವಮ್ಮ ಭಜನಾ ಮಂಡಳಿ ವತಿಯಿಂದ ಭಜನಾ ಕಾರ್ಯಕ್ರಮ, ದಡಿಘಟ್ಟ ಗ್ರಾಮದ ಶ್ರೀ ಲಕ್ಷ್ಮಿದೇವಿ ಕೋಲಾಟ ಸಂಘದ ವತಿಯಿಂದ ಕೋಲಾಟ ಕಾರ್ಯಕ್ರಮ, ಮಧ್ಯಾಹ್ನ 3 ಗಂಟೆಗೆ ದೇವಿಯ ಬೆಳ್ಳಿರಥ, ಮುತ್ತಿನ ಪಲ್ಲಕ್ಕಿ ಉತ್ಸವ, ಮಡೆ ಉತ್ಸವ, ಬಾಯಿ ಬೀಗ, ನವದುರ್ಗಿ ಕುಣಿತ, ವೀರಗಾಸೆ ಹಾಗೂ ಭದ್ರಕಾಳಿ ಕುಣಿತವು ಉತ್ಸವದಲ್ಲಿ ಮೇಳೈಸಲಿವೆ.



ರಾತ್ರಿ 9 ಗಂಟೆಗೆ ರಾಜಾ ಸತ್ಯವ್ರತ ಅಥವಾ ಶನಿ ಪ್ರಭಾವ ಎಂಬ ಪೌರಾಣಿಕ ನಾಟಕವು ಪ್ರದರ್ಶನಗೊಳ್ಳಲಿದೆ. ಅದಕ್ಕೂ ಮೊದಲು ವೇದಿಕೆ ಕಾರ್ಯಕ್ರಮ ಜರುಗಲಿದ್ದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಸ್ವಾಮೀಜಿ, ತಂಡೆಕೆರೆ ಶ್ರೀ ಗಂಗಾಧರೇಶ್ವರ ಸ್ವಾಮೀಜಿ, ಕತ್ತರಿಘಟ್ಟದ ಮಳಿಯಮ್ಮ ಆಧ್ಯಾತ್ಮಿಕ ಕೇಂದ್ರದ ಶ್ರೀ ಚಂದ್ರಶೇಖರ ಗುರೂಜಿ, ಹಿರೀಸಾವೆ ಸಾಯಿಬಾಬಾ ಮಂದಿರದ ಗುರುಮೂರ್ತಿ ಗುರೂಜಿ, ಮಂಜುನಾಥಪುರ ಪುಣ್ಯಧಾಮದ ಧರ್ಮಾಧಿಕಾರಿ ಶ್ರೀಧರ ಸ್ವಾಮೀಜಿ ಹಾಗು ಶಾಸಕ ಸಿ.ಎನ್.ಬಾಲಕೃಷ್ಣ ಪಾಲ್ಗೊಳ್ಳಲಿದ್ದಾರೆ.

ಏ.1ರ ಬುಧವಾರ ಬೆಳಿಗ್ಗೆ ಕೊಂಡೋತ್ಸವ, ದೇವತೆಗಳ ಮಡಿಲಕ್ಕಿ ಉತ್ಸವ, ದೇವತೆಗಳ ಬೀಳ್ಕೊಡುಗೆ ಕಾರ್ಯಕ್ರಮ, ಅನ್ನ ದಾಸೋಹ ಹಾಗೂ ಮಹಾ ಮಂಗಳಾರತಿಯೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ ಎಂದು ಕ್ಷೇತ್ರದ ಧರ್ಮದರ್ಶಿ ದೊರೆಸ್ವಾಮಿ ಸ್ವಾಮೀಜಿ ತಿಳಿಸಿದ್ದಾರೆ.

# ಕಾರು ಹರಿದು ವಿದ್ಯಾರ್ಥಿ ದಾರುಣ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ತಾಲ್ಲೂಕಿನ ಕಾಮಸಮುದ್ರದಲ್ಲಿ ಕಾರು ಹರಿದು 8ನೇ ತರಗತಿ ವಿದ್ಯಾರ್ಥಿ ಶನಿವಾರ ಮೃತಪಟ್ಟಿದ್ದಾನೆ.

ಗ್ರಾಮದ ರಾಧಾಕೃಷ್ಣ ಎಂಬುವವರ ಪುತ್ರ ಚಿರಂತ್ ಗೌಡ (14) ಮೃತ ವಿದ್ಯಾರ್ಥಿ. ಹಳೇಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 8ನೇ ತರಗತಿ ಓದುತ್ತಿದ್ದ ಚಿರಂತ್ ಗೌಡ ಪರೀಕ್ಷೆ ಮುಗಿಸಿ ಕೆಎಸ್‌ಆರ್‌ಟಿಸಿ ಬಸ್ ಮೂಲಕ ಊರಿಗೆ ಬಂದಿದ್ದ. ಬಸ್ ಇಳಿದು ರಸ್ತೆ ದಾಟುವಾಗ ವೇಗವಾಗಿ ಬಂದ ಮಾರುತಿ ಸುಜುಕಿ ಕಾರು ಗುದ್ದಿದೆ. ಅಪಘಾತದ ರಭಸಕ್ಕೆ ಕಾರಿನ ಚಕ್ರ ವಿದ್ಯಾರ್ಥಿ ಮೇಲೆ ಹರಿದಿದೆ. ಗಂಭೀರ ಗಾಯಗೊಂಡಿದ್ದ ಚಿರಂತ್‌ಗೌಡ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಅಪಘಾತಕ್ಕೆ ರಸ್ತೆ ವಿಭಜಕದ ಮೇಲೆ ಬೆಳೆದು ನಿಂತ ಕುರುಚಲು ಗಿಡಗಳು ಕಾರಣವಾಗಿದೆ.

ಕಾರು ಚಾಲಕನಿಗೆ ಬಾಲಕ ಕಾಣದೆ ಇದ್ದರಿಂದ ವೇಗವಾಗಿ ಚಲಾಯಿಸಿದ್ದಾನೆ. ಮೈಸೂರು–ಹಾಸನ ಹೆದ್ದಾರಿಯಲ್ಲಿ ವಾಹನಗಳು ವೇಗವಾಗಿ ಸಂಚರಿಸುತ್ತವೆ. ಎಷ್ಟೇ ಬಾರಿ ಮನವಿ ಮಾಡಿದರೂ ರಸ್ತೆ ಉಬ್ಬು ಅಳವಡಿಸಿಲ್ಲ ಎಂದು ಮೃತನ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅಗ್ನಿವಂಶ ಕ್ಷತ್ರಿಯರಿಗೆ ಅಗತ್ಯ ಸೌಲಭ್ಯ ಕಲ್ಪಿಸಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಅಗ್ನಿವಂಶ ಕ್ಷತ್ರಿಯ ತಿಗಳರ ಸಮುದಾಯ ಏಳಿಗೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ತಾಲ್ಲೂಕು ಅಗ್ನಿವಂಶ ಕ್ಷತ್ರಿಯ ಸಂಘದ ಅಧ್ಯಕ್ಷ ಹೆಚ್.ಪಿ.ಚನ್ನೇಗೌಡ ಆಗ್ರಹಿಸಿದರು.

ಪಟ್ಟಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಗ್ನಿ ಬನ್ನಿರಾಯ ಜಯಂತಿಯಲ್ಲಿ ಮಾತನಾಡಿದ ಅವರು,

ಜನಾಂಗದ ಅಭಿವೃದ್ಧಿಗೆ ಸಂಬಂಧಿಸಿ ಹಲವು ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಬೇಲೂರು ತಾಲ್ಲೂಕಿನಲ್ಲಿ ಎರಡು ಎಕರೆ ಜಾಗ ಮೀಸಲಿಡಬೇಕು. ಸಮುದಾಯ ಭವನ, ಶಿಕ್ಷಣ ಹಾಗೂ ಸಾಮಾಜಿಕ ಚಟುವಟಿಕೆಗಳಿಗೆ ಅಗತ್ಯ ಮೂಲಸೌಕರ್ಯ ನಿರ್ಮಿಸಲು ಅವಕಾಶ ಕಲ್ಪಿಸಬೇಕೆಂದು ಹೇಳಿದರು.

ಆಶ್ರಯವಿಲ್ಲದೆ ಸಂಕಷ್ಟ ಅನುಭವಿಸುತ್ತಿರುವ ಕುಟುಂಬಗಳನ್ನು ಗುರುತಿಸಿ ಸರ್ಕಾರದ ವಿವಿಧ ಯೋಜನೆಗಳಡಿ ಮನೆಗಳನ್ನು ಒದಗಿಸಬೇಕು. ಬೀದಿ ಬದಿಯಲ್ಲಿ ವ್ಯಾಪಾರ ನಡೆಸುತ್ತಿರುವ ಸಮುದಾಯದ ಸದಸ್ಯರ ಸಮಸ್ಯೆಗಳನ್ನೂ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಬೇಲೂರಿನ ಮಾರುಕಟ್ಟೆಯಲ್ಲಿ ಹೂ ಮಾರಾಟ ಮಾಡುವವರಲ್ಲಿ ಬಹುಪಾಲು ತಮ್ಮ ಸಮುದಾಯದವರೇ ಇದ್ದಾರೆ. ಅವರಿಗೆ ಶಾಶ್ವತ ಅಂಗಡಿ, ಕುಡಿಯುವ ನೀರು, ಶೌಚಾಲಯ ಸೇರಿ ಮೂಲಸೌಲಭ್ಯ ಕಲ್ಪಿಸಬೇಕು. ಪುರಸಭೆ ವತಿಯಿಂದ ಸಮುದಾಯದ ಕಾರ್ಯಕ್ರಮ ನಡೆಯಲು ಸಮುದಾಯ ಭವನ ನಿರ್ಮಿಸಿಕೊಡಬೇಕೆಂದು ಆಗ್ರಹಿಸಿದರು.

ಸಂಘದ ಖಜಾಂಚಿ ಬಿ.ಎ.ಮಂಜುನಾಥ್, ಗೋವಿಂದೇಗೌಡ ಹಾಗೂ ಇತರರಿದ್ದರು.

# ಹಿಂದಿ ಭಾಷೆ ನಿರಾಕಾರ ವಿದ್ಯಾರ್ಥಿಗಳ ಹಿತವೇ ಮುಖ್ಯ



**– ಅಂತೋಣಿ ಮುತ್ತು ವಿ., ಶಿಕ್ಷಕರು ಮೊ.ನಂ. 7259675543**

ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೂರನೇ ಭಾಷೆಯ ಅಂಕಗಳನ್ನು ಅಂತಿಮ ಫಲಿತಾಂಶದಲ್ಲಿ ಗಣನೆಗೆ ತೆಗೆದುಕೊಳ್ಳಬಾರದೆಂಬ ವಿಷಯ ದೊಡ್ಡ ಚರ್ಚೆಗೆ ಕಾರಣವಾಗಿದೆ. ಕೆಲವರು ಇದನ್ನು ಬೆಂಬಲಿಸುತ್ತಿದ್ದರೆ, ಇನ್ನೂ ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಈ ನಿರ್ಧಾರವನ್ನು ರಾಜಕೀಯ ಅಥವಾ ಭಾಷಾ ವಿವಾದದ ದೃಷ್ಟಿಯಿಂದ ನೋಡದೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರಿಗಣಿಸುವುದು ಮುಖ್ಯವಾಗಿದೆ.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಮೇಲೆ ಈಗಾಗಲೇ ಸಾಕಷ್ಟು ಒತ್ತಡವಿದೆ. ಗಣಿತ, ವಿಜ್ಞಾನ, ಸಮಾಜಶಾಸ್ತ್ರ, ಇಂಗ್ಲಿಷ್ ಸೇರಿ ಹಲವು ವಿಷಯಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಅವರು ತುಂಬಾ ಶ್ರಮಿಸುತ್ತಾರೆ. ಈ ಸಂದರ್ಭದಲ್ಲಿ ಮೂರನೇ ಭಾಷೆಯ ಅಂಕಗಳು ಕೂಡ ಅಂತಿಮ ಫಲಿತಾಂಶದಲ್ಲಿ ಸೇರಿಸುವುದರಿಂದ ಕೆಲವರಿಗೆ ಅನಗತ್ಯವಾದ ಭಯ ಮತ್ತು ಒತ್ತಡ ಉಂಟಾಗುತ್ತದೆ. ಹಲವಾರು ವಿದ್ಯಾರ್ಥಿಗಳು ಉಳಿದ ವಿಷಯಗಳಲ್ಲಿ ಉತ್ತಮ ಸಾಧನೆ ಮಾಡಿದರೂ, ಮೂರನೇ ಭಾಷೆಯಲ್ಲಿ ಕಡಿಮೆ ಅಂಕ ಬಂದ ಕಾರಣದಿಂದ ಅವರ ಒಟ್ಟು ಫಲಿತಾಂಶ ಕುಸಿಯುವ ಉದಾಹರಣೆಗಳಿವೆ. ಭಾಷೆ ಕಲಿಯುವುದು ತಪ್ಪಲ್ಲ, ಅದು ಜ್ಞಾನವನ್ನು ವಿಸ್ತರಿಸುತ್ತದೆ. ಆದರೆ ಭಾಷೆ ಕಲಿಯುವುದನ್ನು ಕಡ್ಡಾಯವಾಗಿ ಅಂಕಗಳ ಸ್ಪರ್ಧೆಯೊಂದಿಗೆ ಜೋಡಿಸುವುದು ಸರಿಯಾದ ವಿಧಾನವಲ್ಲ ಎಂದು ನನಗೆ ಅನಿಸುತ್ತದೆ. ಮೂರನೇ ಭಾಷೆಗೆ ಗ್ರೇಡ್ ವ್ಯವಸ್ಥೆ ಇರಿಸುವುದು ಒಳ್ಳೆಯ ಕ್ರಮ. ಇದರಿಂದ ವಿದ್ಯಾರ್ಥಿಗಳು ಭಾಷೆಯನ್ನು ಕಲಿಯುವುದನ್ನು ಮುಂದುವರಿಸಬಹುದು, ಆದರೆ ಅದು ಅವರ ಒಟ್ಟು ಫಲಿತಾಂಶವನ್ನು ಹಾನಿಗೊಳಿಸುವುದಿಲ್ಲ.

ಇದೇ ವೇಳೆ ಯಾವುದೇ ಭಾಷೆಯನ್ನು ವಿರೋಧಿಸುವ ಮನೋಭಾವನೆ ಸಮಾಜದಲ್ಲಿ ಇರಬಾರದು. ಕನ್ನಡ ನಮ್ಮ ರಾಜ್ಯದ ಗೌರವವಾಗಿದ್ದರೆ, ಇತರ ಭಾಷೆಗಳೂ ಜ್ಞಾನಕ್ಕೆ ದಾರಿ ತೋರಿಸುವ ಸಾಧನಗಳಾಗಿವೆ. ಆದ್ದರಿಂದ ಭಾಷೆಗಳ ನಡುವೆ ವಿವಾದ ಸೃಷ್ಟಿಸುವುದಕ್ಕಿಂತ ವಿದ್ಯಾರ್ಥಿಗಳ ಕಲಿಕೆಯನ್ನು ಸುಲಭಗೊಳಿಸುವ ಕ್ರಮಗಳನ್ನು ತೆಗೆದುಕೊಳ್ಳುವುದು ಉತ್ತಮ.

ಒಟ್ಟಿನಲ್ಲಿ ನೋಡಿದರೆ, ಮೂರನೇ ಭಾಷೆಯ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳದ ಕ್ರಮ ವಿದ್ಯಾರ್ಥಿಗಳ ಮೇಲೆ ಇರುವ ಒತ್ತಡ ಕಡಿಮೆ ಮಾಡಬಹುದು. ಶಿಕ್ಷಣದ ಉದ್ದೇಶ ಕೇವಲ ಅಂಕಗಳಲ್ಲ, ಜ್ಞಾನ ಮತ್ತು ವ್ಯಕ್ತಿತ್ವದ ಬೆಳವಣಿಗೆಯಾಗಿದೆ ಎಂಬುದನ್ನು ನಾವು ಮರೆಯಬಾರದು.

# ವಿಶ್ವ ಪ್ರಜ್ಞೆ ಕೊರತೆಯೇ ಜಾಗತಿಕ ಸಂಘರ್ಷಕ್ಕೆ ಕಾರಣ: ತಮ್ಮಣ್ಣಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇಂದಿನ ಜಾಗತಿಕ ಸಂಘರ್ಷಕ್ಕೆ ವಿಶ್ವ ಪ್ರಜ್ಞೆ ಮತ್ತು ವಿಶ್ವ ಮಾನವತೆಯ ಕೊರತೆಯೇ ಕಾರಣ. ಆಳುವವರು ವಿಶ್ವ ಪ್ರಜ್ಞೆ ಹಾಗೂ ವಿಶ್ವ ಮಾನವತೆ ರೂಢಿಸಿಕೊಂಡರೆ ಯುದ್ಧಗಳೇ ನಡೆಯುವುದಿಲ್ಲ ಎಂದು ಜಿಲ್ಲಾ ನಿವೃತ್ತ ಶಿಕ್ಷಣಾಧಿಕಾರಿ ಜೆ.ಬಿ.ತಮ್ಮಣ್ಣಗೌಡ ಹೇಳಿದರು.

ಬೆಂಗಳೂರಿನ ಜನತಾ ಶಿಕ್ಷಣ ಸಂಸ್ಥೆ ಒಡೆತನದ, ಗಾಯತ್ರಿ ಬಡಾವಣೆ, ಮಾರುತಿ ನಗರದಲ್ಲಿರುವ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕೆ.ವಿ. ಶಂಕರೇಗೌಡ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಮತ್ತು ಕಾನೂನು ಕುರಿತು ಮಾತನಾಡಿದ ಅವರು, ಮಾನವೀಯ ಮೌಲ್ಯಗಳೇ ಮೊದಲ ಹಾಗೂ ಕೊನೆಯ ದೇವರು. ಹಾಗಾಗಿಯೇ ಏನಾದರೂ ಆಗು, ಮೊದಲು ಮಾನವನಾಗು ಎಂದು ಮಹಾಪುರುಷರು ಹೇಳಿದ್ದಾರೆ ಎಂದರು.

ವಿಶ್ವ ಜ್ಞಾನ ಹಾಗೂ ವಿಶ್ವಮಾನವತ್ವವನ್ನು ಕಲಿಸುವುದು ವಿಶ್ವ ವಿದ್ಯಾಲಯಗಳು, ವಿದ್ಯಾಲಯಗಳ ಜವಾಬ್ದಾರಿ. ಆ ನಿಟ್ಟಿನಲ್ಲಿ ವಿಶ್ವ ವಿದ್ಯಾಲಯಗಳು ಕೆಲಸ ಮಾಡಬೇಕು. ವಿದ್ಯೆ ಸಜೀವ ಸೌಂದರ್ಯ. ಆ ಕಾರಣಕ್ಕಾಗಿಯೇ ತಮ್ಮ ಮಕ್ಕಳು ವಿದ್ಯಾವಂತರಾಗಬೇಕು ಎಂದು ಪ್ರತಿಯೊಬ್ಬ ಪೋಷಕರೂ ಬಯಸುತ್ತಾರೆ. ವಿದ್ಯಾವಂತರಾಗುವುದರ ಜೊತೆಗೆ ವಿಶ್ವಜ್ಞಾನಿಗಳೂ ಆಗಬೇಕು. ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು ಎಂಬುದು




ಘೋಷ ವಾಕ್ಯಕ್ಕಷ್ಟೇ ಸೀಮಿತವಾಗಬಾರದು. ಸಂಪತ್ತಿನ ಸಮಾನ ಹಂಚಿಕೆಗೆ ಸಂವಿಧಾನಬದ್ಧ ಕಾನೂನು ಜಾರಿಯಾಗಬೇಕು ಎಂದೂ ಅವರೂ ಅಭಿಪ್ರಾಯಪಟ್ಟರು.

ರಾಷ್ಟ್ರದ ಪ್ರಗತಿಯು ಶಿಕ್ಷಣ ರಂಗದ ಪ್ರಗತಿಯನ್ನು ಅವಲಂಬಿಸಿದೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಸಂಸ್ಥೆಗಳ ಕೊರತೆಯಿಲ್ಲ. ಶಾಲಾ, ಕಾಲೇಜುಗಳು ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಹೋಗುವಷ್ಟು ಶಿಕ್ಷಣ ಸಂಸ್ಥೆಗಳಿವೆ. ಇಂತಹ ವ್ಯವಸ್ಥೆಯ ಸದುಪಯೋಗವನ್ನು ಶಿಕ್ಷಣಾರ್ಥಿಗಳು ಪಡೆದುಕೊಂಡು ಈಗಿನ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತಹ ಜ್ಞಾನವನ್ನು ಪಡೆದುಕೊಂಡು ಗುರಿ ಸಾಧನೆ ಮಾಡಬೇಕು. ಗುರಿ ದೊಡ್ಡದಿದ್ದರೆ ಸಾಧನೆಯೂ ದೊಡ್ಡದಿರುತ್ತದೆ. ಹಾಗಾಗಿ ದೊಡ್ಡ ಗುರಿಯನ್ನಿಟ್ಟುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜನತಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಅಪ್ಪಾರೆಡ್ಡಿ ಹರೀಶ್ ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪಂಪ, ರನ್ನ, ಪೊನ್ನ, ಕುವೆಂಪು ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇಂತಹ ಸರ್ವ ಶ್ರೇಷ್ಠ ಸಾಹಿತ್ಯವು ಕಾನೂನು ರಚನೆಯಲ್ಲೂ ಮಹತ್ವ ಪಡೆದುಕೊಂಡಿದೆ. ನಮ್ಮ ಸಂವಿಧಾನವು ದೇಶದ ಪ್ರತಿ ಪ್ರಜೆಯೂ ಹೇಗೆ ಬದುಕಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳಿದೆ. ಕನ್ನಡ ಖ್ಯಾತ ಸಾಹಿತಿಗಳೂ ತಮ್ಮ ಸಾಹಿತ್ಯದ ಮೂಲಕ ಮಾನವ ಹೇಗೆ ಬಾಳಬೇಕು ಎಂದು ಹೇಳಿದ್ದಾರೆ. ನಮ್ಮ ಸಾಹಿತ್ಯ ಪರಂಪತೆ ಹಾಗೂ ಸಂವಿಧಾನದ ಬಲದಿಂದ ನಮ್ಮ ದೇಶ ಸುರಕ್ಷಿತವಾಗಿದೆ. ಎಲ್ಲರಿಗೂ ಅವಕಾಶಗಳು ಲಭ್ಯವಾಗುತ್ತಿವೆ. ಒಬ್ಬ ರೈತನ ಮಗನೂ ಪ್ರಧಾನ ಮಂತ್ರಿ ಆಗುವ ಅವಕಾಶವಿದೆ ಎಂದು ಎಚ್.ಡಿ.ದೇವೇಗೌಡ ಅವರು ಪ್ರಧಾನಿಯಾಗಿ ದೇಶ ಮುನ್ನೆಡೆಸಿದ್ದನ್ನು ಉಲ್ಲೇಖಿಸಿದರು.

ಪ್ರಾಂಶುಪಾಲ ಕೆ.ಬಿ. ಕೆಂಪೇಗೌಡ ಮಾತನಾಡಿ, ಜನತಾ ಶಿಕ್ಷಣ ಸಂಸ್ಥೆಯಡಿಯಲ್ಲಿ 14 ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ವಿವೇಕಾನಂದ ಕಾನೂನು ಕಾಲೇಜು ಕೂಡ ಒಂದು. ಜನತಾ ಶಿಕ್ಷಣ ಸಂಸ್ಥೆಯ ಗೌರ್ನಿಂಗ್ ಕೌನ್ಸಿಲ್ ಮೆಂಬರ್ ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕಿನ ಬಿ. ಎನ್ ಶಿವಕುಮಾರ್ ಅವರು ಮಾಜಿ ಸಚಿವ ಕೆ.ವಿ.ಶಂಕರೇಗೌಡ ಅವರ ಹೆಸರಲ್ಲಿ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ದತ್ತಿನಿಧಿ ಸ್ಥಾಪಿಸಿದ್ದಾರೆ. ಅದರಡಿ ಕನ್ನಡ ಸಾಹಿತ್ಯ ಮತ್ತು ಕಾನೂನು ಕುರಿತ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿವರ ನೀಡಿದರು.

ಕೆ.ವಿ. ಶಂಕರೇಗೌಡ ಅವರ ಬಗ್ಗೆಯೂ ಮಾತನಾಡಿದ ಕೆಂಪೇಗೌಡ ಅವರು, 1951 ರಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದ ಕೆ.ವಿ.ಶಂಕರೇಗೌಡ ಅವರು, 1967 ರಿಂದ 5 ವರ್ಷ ಸಚಿರಾಗಿಯೂ ಕೆಲಸ ಮಾಡಿದ್ದರು. ಅವರು 1984 ರಲ್ಲಿ ಲೋಕಸಭೆಗೂ ಮಂಡ್ಯ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ರಂಗ ಕರ್ಮಿ, ಪತ್ರಕರ್ತರಾಗಿಯೂ ಕೆಲಸ ಮಾಡಿದ್ದ ಶಂಕರೇಗೌಡ ಅವರು 1990 ರ ಮಾರ್ಚ 3 ರಂದು ಇಹ ಲೋಕ ತ್ಯಜಿಸಿದರು. ಶಿಕ್ಷಣ ಸಚಿವರಾಗಿ ಅವರು ಮಾಡಿದ ಸಾಧನೆ ಹಾಗೂ ಮಂಡ್ಯದಲ್ಲಿ ಜನತಾ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಅವರನ್ನು ನಿತ್ಯ ಸಚಿವ ಎಂದೂ ಕರೆಯಲಾಗುತ್ತಿತ್ತು ಎಂದು ಹೇಳಿದರು.

ಜನತಾ ಶಿಕ್ಷಣ ಸಂಸ್ಥೆಯ ಕಾರ್ಯನಿರ್ವಾಹಕ ಅಧ್ಯಕ್ಷೆ ಎನ್ ಸ್ವಪ್ನಾ, ಜಂಟಿ ಕಾರ್ಯದರ್ಶಿ ಸತ್ಯಕೀರ್ತಿ ಬಿ.ಎನ್. ಶಿವಕುಮಾರ ಅವರ ಪುತ್ರಿ ವಿಜಯಾ, ಕಾಲೇಜು ಆಡಳಿತ ಮಂಡಳಿಯ ಪಂಕಜಾ, ಇಂದಿರಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅರಕಲಗೂಡಿನಲ್ಲಿ ಶ್ರದ್ಧಾ ಭಕ್ತಿಯ ರಾಮ ನವಮಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದ ಕೋಟೆ ಕೋದಂಡ ರಾಮಸ್ವಾಮಿ ಹಾಗೂ ಬಸವಗುಡಿ ಬೀದಿಯ ರಾಮ ಮಂದಿರದಲ್ಲಿ ಶ್ರೀರಾಮ ನವಮಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಬೆಳಿಗ್ಗೆಯಿಂದಲೇ ಕೋಟೆ ಶ್ರೀರಾಮ ಮತ್ತು ಹನುಮ ದೇವಾಲಯಗಳಲ್ಲಿ ವಿಶೇಷ ಪೂಜೆ, ಭಜನೆ, ಪಾನಕ, ಪನಿವಾರಗಳ ಭಕ್ತರಿಗೆ ವಿತರಣೆ ಮಾಡಲಾಯಿತು.

ಕೋಟೆ ಕೋದಂಡ ರಾಮಸ್ವಾಮಿ ದೇವಾಲಯದಲ್ಲಿ ಬೆಳಿಗ್ಗೆ ಮೂಲ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ ನಡೆಸಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ಬಳಿಕ ದೇವರ ಉತ್ಸವ ಮೂರ್ತಿ ಅಲಂಕರಿಸಿದ ರಥದಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದ ನಂತರ ರಥೋತ್ಸವ ನಡೆಸಲಾಯಿತು. ಮಹಿಳೆಯರು, ಚಿಣ್ಣರು ರಾಮ ನಾಮ ಸ್ಮರಣೆ ಮಾಡುತ್ತಾ ತೆರನ್ನು ರಥ ಬೀದಿಯಲ್ಲಿ ಎಳೆದು ಸಂಭ್ರಮಿಸಿದರು.

ರಥವನ್ನು ಎಳೆಯುವ ಭಕ್ತರ ಬಿಸಿಲಿನ ಬೇಗೆ ನೀಗಲು ಮನೆಗಳಲ್ಲಿ ಪಾನಕ, ಮಜ್ಜಿಗೆ, ನೀರು



ವಿತರಿಸಿದರು. ರಥ ಸ್ವಸ್ಥಾನ ಸೇರಿದ ಬಳಿಕ ದೇವಾಲಯದಲ್ಲಿ ಸಾಮೂಹಿಕ ಭಜನೆ ನಡೆಯಿತು. ಭಕ್ತರಿಗೆ ಪಾನಕ, ಫಲಹಾರ ವಿತರಿಸಲಾಯಿತು. ಸಂಜೆ ಶಾಂತೋತ್ಸವ ನಡೆಯಿತು. ಸ್ವಾತಿ ಪಿ. ಭಾರದ್ವಾಜ್ ಮತ್ತು ಸಂಗಡಿಗರಿಂದ ಭರತನಾಟ್ಯ ನಡೆಯಿತು.

ಬಸವನಗುಡಿ ಬೀದಿಯಲ್ಲಿ ರಾಮೋತ್ಸವ: ಪಟ್ಟಣದ ಬಸವನಗುಡಿ ಬೀದಿಯ ನೇಕಾರ ಕುರುಹೀನ ಶೆಟ್ಟಿ ಸಂಘದವರು 23ನೇ ವರ್ಷದ ರಾಮೋತ್ಸವ ಅದ್ದೂರಿಯಾಗಿ ನಡೆಸಿದರು.

ಬೆಳಿಗ್ಗೆ ರಾಮದೇವರಿಗೆ ವಿಶೇಷ ಪೂಜೆ, ವಿವಿಧ ಹೋಮಗಳನ್ನು ನಡೆಸಿ ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಮದ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆ ನಡೆಯಿತು. ಸಂಜೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸೀತಾ, ಲಕ್ಷ್ಮಣ, ಹನುಮಂತ ಸಮೇತ ಶ್ರೀ ರಾಮ ದೇವರ ಭವ್ಯ ಬೆಳ್ಳಿ ರಥ ಉತ್ಸವ ಹಾಸನದ ಇಸ್ಕಾನ್ ಭಕ್ತಾಧಿಗಳಿಂದ ರಾಮನಾಮ ಸಂಕೀರ್ತನೆಗಳೊಂದಿಗೆ ಅದ್ದೂರಿಯಾಗಿ ಜರುಗಿತು. ರಾಮನವಮಿ ಉತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು.

## ಸೀತಾರಾಮಾಂಜನೇಯ ದೇಗುಲದಲ್ಲಿ 52ನೇ ವರ್ಷದ ರಾಮ ನವಮಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ ದೇವಸ್ಥಾನ ರಸ್ತೆಯ ಸೀತಾರಾಮಾಂಜನೇಯ ದೇಗುಲದಲ್ಲಿ 52ನೇ ವರ್ಷದ ಶ್ರೀ ರಾಮನವಮಿ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ನೂತನವಾಗಿ ನಿರ್ಮಿಸಲಾದ ಶ್ರೀರಾಮನ ರಥಕ್ಕೆ ಚಾಲನೆ ನೀಡಲಾಗಿದ್ದು, ಭಕ್ತರಲ್ಲಿ ವಿಶೇಷ ಸಂಭ್ರಮ ಮೂಡಿಸಿತು.

ಮುಂಜಾನೆದಿಂದಲೇ ದೇಗುಲದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡವು. ಪ್ರಧಾನ ಅರ್ಚಕ ನಂಜುಂಡಸ್ವಾಮಿ ಹಾಗೂ ನಾಗಭೂಷಣ್ ಅವರ ನೇತೃತ್ವದಲ್ಲಿ ಶ್ರೀರಾಮ, ಹನುಮಂತ ಹಾಗೂ ನವಗ್ರಹ ದೇವತೆಗಳಿಗೆ ಅಭಿಷೇಕ, ಮಹಾಭಿಷೇಕ ನೆರವೇರಿಸಲಾಯಿತು. ನಂತರ ಬಾಲರಾಮ-ಲಕ್ಷ್ಮಣ ಮೂರ್ತಿಯನ್ನು ತೊಟ್ಟಿಲಲ್ಲಿ ಮಲಗಿಸಿ ಮುತ್ತೈದೆಯರಿಂದ ಜೋಗುಳ ಹಾಡಿಸುವ ಮೂಲಕ ಸಂಪ್ರದಾಯಬದ್ಧವಾಗಿ ಆಚರಣೆ ನಡೆಯಿತು.

ದೇಗುಲದ ಪ್ರಧಾನ ರಘುಪತಿ ಹತ್ವಾರ್ ಮಾತನಾಡಿ, ನಮ್ಮ ಪೂರ್ವಿಕರಿಂದಲೇ ಈ ದೇವಾಲಯದಲ್ಲಿ ರಾಮನವಮಿ ಹಾಗೂ ಹನುಮ ಜಯಂತಿ ಆಚರಣೆ ನಡೆದುಕೊಂಡು ಬಂದಿದೆ. ಭಕ್ತರ ಸಹಕಾರದಿಂದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ. ಸುಮಾರು 5 ಲಕ್ಷ ರೂ. ವೆಚ್ಚದಲ್ಲಿ ನಮ್ಮ ಕುಟುಂಬದ ಸಹಕಾರದಿಂದ ನೂತನ ರಥವನ್ನು ನಿರ್ಮಿಸಿದ್ದೇವೆ. ಪ್ರತಿ ವಾರ ವಿಶೇಷ ರಥೋತ್ಸವ ನಡೆಸುವ ಯೋಜನೆ ಇದ್ದು, ಭಕ್ತರ ಸಹಕಾರ ಅಗತ್ಯ ಎಂದು ತಿಳಿಸಿದರು.

ಕೇಶವಮೂರ್ತಿ ಹತ್ವಾರ್ ಮಾತನಾಡಿ, ಪ್ರತಿ ವರ್ಷ ಹನುಮ ಜಯಂತಿ ಸೇರಿದಂತೆ ಎಲ್ಲಾ ಹಬ್ಬಗಳಲ್ಲೂ ಇಲ್ಲಿ ವಿಶೇಷ ಪೂಜೆಗಳು ನಡೆಯುತ್ತಿವೆ. ಹತ್ವಾರ್ ವಂಶಸ್ಥರು ದೇವಾಲಯದ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ. ಈ ವರ್ಷ ನೂತನ ರಥದ ವ್ಯವಸ್ಥೆ ಮಾಡಿರುವುದು ಭಕ್ತರಿಗೆ ಮತ್ತಷ್ಟು ಅನುಕೂಲಕರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಉಪೇಂದ್ರ, ಮುರಳೀಧರ್, ಶ್ರೀಪತಿ, ರಾಘವೇಂದ್ರ, ಕೆಡಿಪಿ ಸದಸ್ಯೆ ಸೌಮ್ಯ ಆನಂದ್ ವಾಸುದೇವ ಧನ್ಯ, ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಎಂ. ದಯಾನಂದ್ ಇತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಮಾರ್ಚ್-29

1857: ಸಿಪಾಯಿ ದಂಗೆಗೆ ಮುನ್ನುಡಿ ಬರೆಯುವಂತೆ ಮಂಗಲ್ ಪಾಂಡೆ ಅವರು ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಬಂಡಾಯ ಎತ್ತಿದರು.

1973: ಅಮೆರಿಕದ ಕೊನೆಯ ಸೈನಿಕರು ವಿಯಟ್ನಾಂನಿಂದ ಹಿಂತೆಗೆದುಕೊಳ್ಳಲಾಯಿತು. ಇದರಿಂದ ವಿಯಟ್ನಾಂ ಯುದ್ಧದಲ್ಲಿ ಅಮೆರಿಕದ ನೇರ ಪಾಲ್ಗೊಳ್ಳುವಿಕೆ ಅಂತ್ಯಗೊಂಡಿತು.

**ಜನನ**

1790: ಜಾನ್ ಟೈಲರ್, ಅಮೆರಿಕದ 10ನೇ ರಾಷ್ಟ್ರಪತಿ

1962: ರವೀನಾ ಟಂಡನ್, ಭಾರತೀಯ ನಟಿ

**ಮರಣ**

2004: ಶಂಕರ ದಯಾಳ್ ಶರ್ಮಾ, ಭಾರತದ ಮಾಜಿ ರಾಷ್ಟ್ರಪತಿ

# ವ್ಯಕ್ತಿತ್ವ ದೋಷದ ಖಾಯಿಲೆಗಳು

**- ಎನ್.ಆರ್.ಪ್ರಶಾಂತ್**
**ಆಪ್ತ ಸಲಹಾ ಮನಃಶಾಸ್ತ್ರಜ್ಞ,**
**ಮೊ.ನಂ. 9481545719**



ವಿವಿಧ ವ್ಯಕ್ತಿತ್ವ ಸಿದ್ಧಾಂತಿಗಳು ತಮ್ಮ ಸೈದ್ಧಾಂತಿಕ ನಿಲುವನ್ನು ಆಧರಿಸಿ ವ್ಯಕ್ತಿತ್ವದ ಬಗ್ಗೆ ತಮ್ಮ ವ್ಯಾಖ್ಯಾನ ಮಂಡಿಸುತ್ತಾರೆ. ಮನೋವಿಶ್ಲೇಷಣಾ ಸಿದ್ಧಾಂತದ ಪ್ರತಿಪಾದಕ ಸಿಗ್ಮಂಡ್ ಫ್ರಾಯ್ಡ್ ಹಾಗು ಎರಿಕ್‌ಸನ್ ರಂತಹ ಮನೋವಿಜ್ಞಾನಿಗಳು ವ್ಯಕ್ತಿತ್ವ ಸಿದ್ಧಾಂತಗಳನ್ನು ಪ್ರಸ್ತಾಪಿಸಲು ಪ್ರಯತ್ನಿಸಿದ್ದಾರೆ. ಶರೀರದ ಹೊರ ರೂಪ, ಉಡುಗೆ-ತೊಡುಗೆ, ಜ್ಞಾನ, ತಿಳವಳಿಕೆ, ಧೋರಣೆ, ಬುದ್ಧಿಚಾತುರ್ಯ, ಭಾವನೆಗಳನ್ನು ಪ್ರಕಟಿಸುವ ರೀತಿ, ಸ್ವಾರ್ಥ ಹಾಗು ಪರಹಿತಕ್ಕೆ ಕೊಡುವ ಆದ್ಯತೆ, ನೈತಿಕ ಮೌಲ್ಯಗಳು, ಯಾವುದೇ ಸನ್ನಿವೇಶಕ್ಕೆ ಸಂದರ್ಭಕ್ಕೆ ಪ್ರಕಟವಾಗುವ ಪ್ರತಿಕ್ರಿಯೆಗಳು, ಜೀವನದ ಗುರಿ-ಉದ್ದೇಶಗಳೆಲ್ಲವೂ ಸೇರಿ ವ್ಯಕ್ತಿತ್ವ ಎನಿಸಿಕೊಳ್ಳುತ್ತದೆ. ಪ್ರತಿಯೊಬ್ಬ ಮನುಷ್ಯನ ವ್ಯಕ್ತಿತ್ವದ ಗುಣಲಕ್ಷಣಗಳು ಅವನ ಆಲೋಚನೆ, ಭಾವನೆ, ವರ್ತನೆಗಳ ಮೇಲೆ ನಿರ್ಧಾರಿತವಾಗಿರುತ್ತದೆ.

ಒಬ್ಬ ಆರೋಗ್ಯಕರ ಹಾಗು ಒಳ್ಳೆಯ ವ್ಯಕ್ತಿತ್ವವಿರುವ ವ್ಯಕ್ತಿ ತಾನೂ ಕ್ಷೇಮವಾಗಿ ಇತರರೂ ಕ್ಷೇಮವಾಗಿರಲು ಬಯಸಿ ಅದರಂತೆ ಕಾರ್ಯ ನಿರ್ವಹಿಸಿ, ಬದುಕಿನಲ್ಲಿ ಸ್ವಾವಲಂಬಿಯಾಗಿ, ಸಮಾಜಕ್ಕೆ ಉಪಯುಕ್ತವಾಗಿ ಬಹುತೇಕ ಜನರೊಡನೆ ಹೊಂದಿಕೊಂಡು ಪ್ರಗತಿಯೆಡೆಗೆ ಸಾಗುತ್ತಾನೆ. ವ್ಯಕ್ತಿತ್ವದ ವಿಕಾಸ ಹುಟ್ಟುವ ಮೊದಲೆ ಪ್ರಾರಂಭವಾಗಿ (ಜೀನ್ಸ್‌ಗಳ ಪ್ರಭಾವದಿಂದ) ಹುಟ್ಟಿದ ಮೇಲೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಬೆಳೆಯುತ್ತದೆ. ಅನುವಂಶೀಯತೆ, ತಂದೆ-ತಾಯಿಯ ಪಾಲನೆ-ಪೋಷಣೆ, ಕುಟುಂಬದ ಪರಿಸರ, ನೆರೆಹೊರೆ, ಶಾಲೆಯ ಶಿಕ್ಷಣ, ಸಹಪಾಠಿಗಳು, ಆಗಿಂದಾಗೆ ಘಟಿಸುವ ಘಟನೆಗಳೂ, ಅನಾರೋಗ್ಯ, ಆರ್ಥಿಕ ಪರಿಸ್ಥಿತಿ, ವ್ಯಕ್ತಿತ್ವ ವಿಕಾಸದ ಮೇಲೆ ಪರಿಣಾಮಬೀರುತ್ತಲೇಇರುತ್ತವೆ.

ಕೆಲವರಲ್ಲಿ ಈ ವ್ಯಕ್ತಿತ್ವ ವಿಕಸನ ಸರಿಯಾಗಿನಡೆಯದೆ ಅನೇಕ ನ್ಯೂನತೆ, ಕೊರತೆಗಳು ಸೇರಿಕೊಂಡು ವ್ಯಕ್ತಿತ್ವ ದೋಷ ಉಂಟಾಗುತ್ತದೆ. ಇದರಿಂದ ವ್ಯಕ್ತಿಯೂ, ಮನೆಯವರೂ, ಸಮಾಜವೂ ಅನೇಕ ಕಷ್ಟ, ನಷ್ಟ, ನೋವುಗಳಿಗೆ ತುತ್ತಾಗಬೇಕಾಗುತ್ತದೆ.

### ವ್ಯಕ್ತಿತ್ವ ದೋಷಗಳು

ಸಂಶಯ ಪೀಡಿತ ವ್ಯಕ್ತಿತ್ವ: ಯಾರಲ್ಲೂ ನಂಬಿಕೆ, ವಿಶ್ವಾಸಗಳಿಲ್ಲದೆ, ಇತರರು ತನ್ನ ಹಿತಕ್ಕೆ, ಕ್ಷೇಮಕ್ಕೆ ವಿರುದ್ಧವಾಗಿದ್ದಾರೆ, ತನಗೆ ಕೆಟ್ಟದ್ದನ್ನು ಮಾಡಲು, ಹಾನಿಯುಂಟು ಮಾಡಲು ಸಿದ್ಧರಿದ್ದಾರೆ. ತನಗೆ, ತನ್ನ ಸೋದರ, ಸೋದರಿ, ಗಂಡ ಅಥವಾ ಹೆಂಡತಿ, ಸ್ನೇಹಿತರು, ಸಹೋದ್ಯೋಗಿಗಳು ಪ್ರಾಮಾಣಿಕರಾಗಿಲ್ಲ, ನಿಷ್ಠರಾಗಿಲ್ಲ. ಮೋಸ ವಂಚನೆ, ಮಾಡಲು ಪ್ರಯತ್ನಿಸುತಿದ್ದಾರೆ ಎಂಬ ಅನುಮಾನ ಸಂಶಯ ಪೀಡಿತ ವ್ಯಕ್ತಿಗಳ ವ್ಯಕ್ತಿತ್ವದ ಒಂದು ಭಾಗವಾಗಿ ಬಿಡುತ್ತದೆ. ತಾನೇ ಸರಿ, ತಾನು ಮಾಡುವುದೇ ಸರಿ, ಇತರರು ಸರಿಯಾಗಿಲ್ಲ ಎಂಬ ಧೋರಣೆಯ ಜೊತೆಗೆ ಜಿಗುಟುತನ ಇರುತ್ತದೆ. ಇಂತಹವರು ಯಾವುದೇ ರೀತಿಯ ಬದಲಾವಣೆ ಇಷ್ಟಪಡುವುದಿಲ್ಲ.

ಅತಿ ಅಚ್ಚುಕಟ್ಟುತನ: ಎಲ್ಲವೂ ಪರಿಪೂರ್ಣವಾಗಿರಬೇಕು. ಪ್ರತಿಯೊಂದೂ ಅಚ್ಚುಕಟ್ಟಾಗಿರಬೇಕು, ಸಮಯ ಪಾಲನೆ ಸರಿಯಾಗಿ ಮಾಡಬೇಕು. ಏನು ಕೆಲಸ ಮಾಡಿದರೂ ಅದು ಏ-ಒನ್ ಆಗಿರಬೇಕು, ಪ್ರತಿಯೊಂದು ವಸ್ತು ಎಲ್ಲಿರಬೇಕೋ ಅಲ್ಲಿರಬೇಕು, ವ್ಯವಸ್ಥಿತವಾಗಿರಬೇಕು. ಸ್ವಲ್ಪವೂ ಕೂಡ ಹೆಚ್ಚು ಕಡಿಮೆಯಾಗಬಾರದು, ಎಲ್ಲಿಯೂ ಕಸ-ಕಡ್ಡಿ ಕೊಳಕಿರಬಾರದು ಪ್ರತಿಶತ ನೂರರಷ್ಟು ಶಿಸ್ತು ಇರಬೇಕೆಂದು ಬಯಸುವುದರ ಜೊತೆಗೆ ತಮ್ಮೊಡನೆ ಇತರರೂ ಹಾಗೆಯೆ ನಡೆದುಕೊಳ್ಳಬೇಕೆಂದು ನಿರೀಕ್ಷಿಸುತ್ತಾರೆ. ಹಾಗೊಂದು ವೇಳೆ ತಾವು ಅಂದುಕೊಂಡಂತೆ ಇಲ್ಲದಿದ್ದರೆ ಅಥವಾ ಆಗದಿದ್ದರೆ ಬಹಳ ವಿಚಲಿತರಾಗುತ್ತಾರೆ.ಇದು ಒಂದು ಮಿತಿಯಲ್ಲಿದ್ದರೆ ಚೆನ್ನ, ಆದರೆ ಮಿತಿಮೀರಿದಾಗ ಎಲ್ಲರೂ ತೊಂದರೆ ಅನುಭವಿಸುತ್ತಾರೆ.

ಉನ್ಮಾದ ವ್ಯಕ್ತಿತ್ವ: ಅತಿಯಾದ ಭಾವೋದ್ವೇಗ, ನಾಟಕೀಯತೆ, ಇತರರ ಗಮನವನ್ನು ತನ್ನೆಡೆಗೆ ಸೆಳೆಯುವ ನಡವಳಿಕೆ. ಶ್ರಮ ಪಡಲು ತಯಾರಿಲ್ಲದ ಮನಃಸ್ಥಿತಿ. ವಿಫಲತೆಗೆ ಹಾಗು ನಿರಾಶೆಗೆ ತೀವ್ರವಾಗಿ ಪರಿತಪಿಸುವುದು. ಅದಕ್ಕಾಗಿ ಇತರರನ್ನು ದೂಷಿಸುವುದು, ಸಂಬಂಧಗಳಲ್ಲಿ ಗಂಭೀರತೆ ಇಲ್ಲದಿರುವುದು ಮತ್ತು ಹುಡುಗಾಟಿಕೆಯ ಪ್ರವೃತ್ತಿ ಹೆಚ್ಚು ಕಂಡುಬರುತ್ತದೆ.

ಸಾಮಾಜಿಕ ಸನ್ನಿವೇಶಗಳಲ್ಲಿ ಅತಿಯಾದ ಆತಂಕ: ಆದಷ್ಟು ಜನರೊಂದಿಗೆ ಬೆರೆಯುವುದನ್ನು ತಪ್ಪಿಸಿಕೊಳ್ಳುವ ತವಕ, ಜನರ ನಡುವೆ ಇರುವಾಗ ಏನೋ ಮುಜುಗರ, ಸಂಕೋಚ, ಸಭೆ-ಸಮಾರಂಭಗಳಲ್ಲಿ ಭಾಗವಹಿಸಲು ನಿರಾಕರಣೆ. ಈ ವ್ಯಕ್ತಿತ್ವದ ಪ್ರಮುಖ ಲಕ್ಷಣಗಳು.

ಸಮಾಜ ವಿರೋಧಿ ವ್ಯಕ್ತಿತ್ವ: ಅತಿಯಾದ ಸ್ವಾರ್ಥತನ, ಇದಕ್ಕಾಗಿ ನೀತಿ-ನಿಯಮಗಳನ್ನು, ಮೌಲ್ಯಗಳನ್ನು ಬಿಡಲು ಸದಾಸಿದ್ಧರಿರುತ್ತಾರೆ. ಬೇರೆಯವರ ಯೋಗ ಕ್ಷೇಮದ ಬಗ್ಗೆ ನಿರ್ಲಕ್ಷ್ಯ ಮನೋಭಾವ. ಮೋಸ, ವಂಚನೆ, ಅಪರಾಧ ಮಾಡಲು ಹಿಂಜರಿಯುವುದಿಲ್ಲ. ತನ್ನ ಬೇಕು-ಬೇಡಗಳ ಬಗ್ಗೆಯೆ ಸದಾ ಮಗ್ನತೆ, ಸುಖಪಡುವುದೇ ಇವರ ಗುರಿ. ಇಂತಹವರು ಅಪರಾಧ ಜಗತ್ತಿನೊಳಗೆ ಪ್ರವೇಶ ಪಡೆದರೆ ಎಂತಹ ಹೀನವಾದ ಅಪರಾಧ ಮಾಡಲೂ ಸಿದ್ಧರಿರುತ್ತಾರೆ. ತಪ್ಪಿತಸ್ಥ ಭಾವನೆಯಾಗಲಿ, ಪಾಪಪ್ರಜ್ಞೆಯಾಗಲಿ ಇರುವುದಿಲ್ಲ. ಶಿಕ್ಷೆಯಿಂದ ಪಾಠ ಕಲಿಯುವುದಿಲ್ಲ ಬದಲಾಗಿ ಮಾಡಿದ ತಪ್ಪನ್ನೆ ಮತ್ತೆ ಮಾಡಲು ತಯಾರಿರುತ್ತಾರೆ.

### ಗಡಿ ರೇಖೆಯ ವ್ಯಕ್ತಿತ್ವ ದೋಷ

(ಬಾರ್ಡರ್ ಲೈನ್ ಪರ್ಸನಾಲಟಿಡಿಸಾರ್ಡರ್); ಸದಾ ಒಂಟಿತನ. ಆಗೊಮ್ಮೆ ಈಗೊಮ್ಮೆ ಆತ್ಮಹತ್ಯಾ ಹಾಗು ಹಿಂಸಾಚಾರ ಪ್ರಯತ್ನ. ವಿಚಿತ್ರವಾಗಿ ವರ್ತಿಸುವುದು, ಅಲ್ಪಾವಧಿಗೆ ಅಸಂಬದ್ಧ ನಡೆ-ನುಡಿಗಳನ್ನು ವ್ಯಕ್ತಪಡಿಸುವುದು. ಹತಾಶೆ ಅಥವಾ ನಿರಾಶೆಗಳನ್ನು ನಿಭಾಯಿಸುವ ಮಾನಸಿಕ ಶಕ್ತಿ ಹಾಗು ಚತುರತೆ ಇಲ್ಲದಿರುವುದು, ಸಂಬಂಧಗಳನ್ನು ಉಳಿಸಿಕೊಳ್ಳಲು ವಿಫಲವಾಗುವುದು. ಬಹುಬೇಗ ಭಾವೋದ್ವೇಗಕ್ಕೆ ಒಳಗಾಗುವುದು. ತನ್ನ ಬಗ್ಗೆ ಕೀಳರಿಮೆ, ತನ್ನ ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳಲಾಗದೆ ತಾನೂ ಹಿಂಸೆ ಪಟ್ಟು ಇತರರಿಗೂ ಹಿಂಸೆ ನೀಡುವುದು, ಹಿಂದೆ ಮುಂದೆ ನೋಡದೆಸಾಧಕ-ಬಾಧಕಗಳ ಬಗ್ಗೆ ಚರ್ಚಿಸದೆ, ಚಿಂತಿಸದೆ ದುಡುಕಿನ ನಿರ್ಧಾರ ತೆಗೆದುಕೊಳ್ಳುವುದು ಇತ್ಯಾದಿಗಳು ಈ ವ್ಯಕ್ತಿತ್ವದೋಷದಮುಖ್ಯ ಲಕ್ಷಣಗಳು.

ಆಕ್ರಮಣಕಾರಿ ವ್ಯಕ್ತಿತ್ವ. ಅತಿಅಲ್ಪವಾದ ಸೋಲಿಗೂ ಅತಿಯಾದ ನಿರಾಶೆ, ವಿಪರೀತ ಸಿಟ್ಟು,ಕೋಪ ಪ್ರಕಟಿಸುವುದು, ಮನೆಯವರ ಮೇಲೆ ಇತರರ ಮೇಲೆ, ಆಕ್ರಮಣ ಮಾಡುವುದು, ಜಗಳ ಹಾಗು ಹಿಂಸಾಚಾರಕ್ಕೆ ಇಳಿಯುವುದು, ಇವರಲ್ಲಿ ಕಂಡುಬರುವ ಪ್ರವೃತ್ತಿ, ಇವರಿಗೆ ತಮ್ಮ ನಿರಾಶೆ, ಅತೃಪ್ತಿಗಳನ್ನು ಸರಿಯಾಗಿ ನಿಭಾಯಿಸಲಾಗುವುದಿಲ್ಲ.

ಪರಾವಲಂಬನೆಯ ವ್ಯಕ್ತಿತ್ವ: ಎಲ್ಲದಕ್ಕೂ ಇತರರನ್ನು ಅವಲಂಬಿಸುವುದು, ಸ್ವಂತವಾಗಿ ಏನನ್ನೂ ಮಾಡಲಾರರು, ಬುದ್ಧಿ, ವಿವೇಚನೆ ಇದ್ದರೂ ಅದನ್ನು ಬಳಸಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಾರರು, ಯಾವುದೇ ನಿರ್ಧಾರ ಅಥವಾ ತೀರ್ಮಾನ ಸಣ್ಣದಾಗಿರಲಿ, ದೊಡ್ಡದಾಗಿರಲಿ ಬೇರೆಯವರ ಸಲಹೆ, ಸೂಚನೆಯಂತೆಯೇ ನಡೆಯಲಿಚ್ಚಿಸುತ್ತಾರೆ. ಪ್ರೌಢ ವಯಸ್ಸಿನ ವರೆಗೆ ತಂದೆ, ತಾಯಿ ಹಾಗು ಮನೆಯವರ ಮೇಲೆ ಅವಲಂಬನೆ, ಮದುವೆಯಾದ ಮೇಲೆ ಜೀವನ ಸಂಗಾತಿಯ ಮೇಲೆ ಅವಲಂಬನೆ. ತಾನು ಮಾಡಿದ್ದು ಸರಿಹೋಯಿತೆ, ತಾನು



ತೆಗೆದುಕೊಂಡ ನಿರ್ಧಾರ ಒಳ್ಳೆಯದೆ ಎಂದು ಇತರರನ್ನು ಕೇಳುತ್ತಲೇಇರುತ್ತಾರೆ. ಬೇರೆಯವರಿಗೆ ತನ್ನಿಂದಾಗುವುದಿಲ್ಲ ಎಂದು ಹೇಳಲು ಸಂಕೋಚ ಅಥವಾ ನೀವು ಮಾಡಿದ್ದು ಸರಿಯಿಲ್ಲ ಎಂದು ಹೇಳಲು ಹೆದರಿಕೆ. ಒಂಟಿಯಾಗಿರಲು ಭಯ, ಎಲ್ಲರೂ ತನ್ನನ್ನು ದೂರ ಮಾಡಿಬಿಡುತ್ತಾರೇನೋ, ತನ್ನ ನೆರವಿಗೆ ಯಾರೂ ಬರುವುದಿಲ್ಲವೇನೋ ಎಂಬ ಆತಂಕ ಇವರಲ್ಲಿ ಯಾವಾಗಲೂ ಇರುತ್ತದೆ.

ಸ್ಕಿಜಾಯಿಡ್ ವ್ಯಕ್ತಿತ್ವ: ಸದಾತಾನಾಯಿತು, ತನ್ನ ಪಾಡಾಯಿತು, ಎಲ್ಲ ಸಮಯದಲ್ಲಿಯೂ ಒಂಟಿಯಾಗೇ ಇರಲು ಇಚ್ಚಿಸುವುದು, ಯಾರೊಂದಿಗೂ ಮುಕ್ತವಾಗಿ ಮಾತನಾಡಲು, ಆಳವಾದ ಸಂಬಂಧ ಇಟ್ಟುಕೊಳ್ಳಲು ಬಯಸುವುದಿಲ್ಲ. ತನ್ನ ಅನಿಸಿಕೆ, ಅನುಭವ, ಭಾವನೆಗಳನ್ನು, ಆಸೆ-ಆಕಾಂಕ್ಷೆಗಳನ್ನು ಇತರರೊಂದಿಗೆಹಂಚಿಕೊಳ್ಳುವುದಿಲ್ಲ. ಒಂಟಿಯಾಗೆ ಮಾಡಬಲ್ಲ ಕೆಲಸ ಹಾಗು ಹವ್ಯಾಸಗಳಲ್ಲಿ ಮಗ್ನರಾಗಿರುತ್ತಾರೆ. ಹೊಗಳಿಕೆಗೆ, ತೆಗಳಿಕೆಗೆ ಒಂದು ಬಗೆಯ ನಿರ್ಲಿಪ್ತತೆಇರುತ್ತದೆ. ಭಾವೋದ್ವೇಗಉಂಟುಮಾಡುವ ಸನ್ನಿವೇಶಗಳಲ್ಲಿಯೂ ತಣ್ಣಗಿರುತ್ತಾರೆ. ಜೀವನ ಸಂಗಾತಿಯೂ ಸೇರಿದಂತೆಎಲ್ಲರ ಪಾಲಿಗೂ ಈತಅಥವಾ ಈಕೆ ಮುಚ್ಚಿದ ಪುಸ್ತಕ! ಒಳಗೇನಿದೆ ಯಾರಿಗೂ ತಿಳಿಯುವುದಿಲ್ಲ.

ಸ್ಕಿಜೊಟೈಪಲ್ ವ್ಯಕ್ತಿತ್ವ; ಇತರರು ತನ್ನ ಬಗ್ಗೆ ಮಾತನಾಡಿಕೊಳ್ಳಬಹುದು, ಆಡಿಕೊಳ್ಳಬಹುದೆನ್ನುವ ಅನುಮಾನ, ಬಹಳ ಮೂಢ ನಂಬಿಕೆ, ಅಂಧಶ್ರದ್ಧೆ, ಎಲ್ಲ ರೀತಿಯ ಶಕುನಗಳಲ್ಲಿಯೂ ಅತಿಯಾದ ನಂಬಿಕೆ, ಅತಿರಮ್ಯ, ಭೀಕರ ಕಲ್ಪನೆಗಳನ್ನು ಮಾಡಿಕೊಂಡು ಸಂತೋಷ ಪಡುವುದು ಅಥವಾ ಭಯಪಡುವುದು. ಇತರರಿಗೆ ಅರ್ಥವಾಗದ ವಿಚಾರಗಳನ್ನು ಮಾತನಾಡುವುದು. ಮಾತು ಮತ್ತು ವರ್ತನೆಗಳಲ್ಲಿ ಸಂಶಯ ಪ್ರವೃತ್ತಿ, ಕೆಲವು ಸನ್ನಿವೇಶ ಸಂದರ್ಭಗಳಿಗೆ ವ್ಯತಿರಿಕ್ತವಾದ ಭಾವನೆಗಳನ್ನು ವ್ಯಕ್ತಪಡಿಸುವುದು. ಆಪ್ತರಾಗಲಿ, ಆತ್ಮಿಯ ಸ್ನೇಹಿತರಾಗಲಿ ಇರುವುದಿಲ್ಲ. ಇವರಿಗೆ ವಿಚಿತ್ರ ವ್ಯಕ್ತಿ ಎಂಬ ಹಣೆಪಟ್ಟಿ.

ಈ ರೀತಿಯ ವ್ಯಕ್ತಿತ್ವ ದೋಷಪೂರಿತ ವರ್ತನೆಗಳಿಗೆ ನಿರ್ದಿಷ್ಟ ಕಾರಣಗಳಿಲ್ಲ. ಹಲವು ಅಂಶಗಳು ಸೇರಿ ಈ ಬಗೆಯ ದೋಷಪೂರಿತ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಅನುವಂಶೀಯತೆ, ಮೆದುಳಿಗೆ ಸಣ್ಣಪ್ರಮಾಣದ ಹಾನಿ, ತಂದೆ-ತಾಯಿಯ ಪೋಷಕರ ಲಾಲನೆ-ಪಾಲನೆಯಲ್ಲಿ ದೋಷ, ಅತಿಮುದ್ದು, ಅಥವಾ ಅತಿ ಶಿಕ್ಷೆ, ಅತಿಯಾದ ತಿರಸ್ಕಾರದ ವಾತಾವರಣ ಹಾಗು ಶ್ಲಾಘನೆ, ಮೆಚ್ಚುಗೆ ಇಲ್ಲದಿರುವುದು, ರೀತಿ ನೀತಿಗಳನ್ನು ಕಲಿಸದಿರುವುದು, ಕುಟುಂಬದ ಇತರ ಸದಸ್ಯರಲ್ಲಿ ನೈತಿಕ ಮೌಲ್ಯಗಳು, ಶಿಸ್ತು-ಸಂಯಮ ಇಲ್ಲದಿರುವುದು, ಯೋಗ್ಯ ಶಿಕ್ಷಣ ದೊರೆಯದಿರುವುದು. ಕೆಟ್ಟ ಮಾದರಿ ಹಾಕಿಕೊಡುವ ಮಾಧ್ಯಮಗಳು, ಸಮಾಜದ ನೈತಿಕ ಮೌಲ್ಯವಿಲ್ಲದ ನಾಯಕರ ಮಾರ್ಗದರ್ಶನ ಹೀಗೆ ಹಲವು ಕಾರಣಗಳಿಂದ ವ್ಯಕ್ತಿತ್ವ ಬೆಳವಣಿಗೆಯಲ್ಲಿ ವ್ಯತ್ಯಯ ಉಂಟಾಗಿ ವ್ಯಕ್ತಿಯು ವ್ಯಕ್ತಿತ್ವ ದೋಷದ ಕಾಯಿಲೆಯಿಂದ ಬಳಲುವಂತಾಗುತ್ತಾನೆ.

ಚಿಕಿತ್ಸೆ: ಮನೋಚಿಕಿತ್ಸೆ, ಆಪ್ತ ಸಲಹೆ, ಮಾರ್ಗದರ್ಶನ ಮತ್ತು ವರ್ತನಾ ಚಿಕಿತ್ಸೆಗಳ ಮೂಲಕ ನಡವಳಿಕೆಯಲ್ಲಿ ಸುಧಾರಣೆ ಮಾಡಬಹುದು. ಜೊತೆಗೆ ವ್ಯಕ್ತಿಯ ಮನವೊಲಿಕೆ, ವ್ಯಕ್ತಿತ್ವದಲ್ಲಿರುವ ದೋಷಗಳನ್ನು ಸರಿಪಡಿಸಿಕೊಳ್ಳಲು ಒತ್ತಾಯ. ಆತ ಅಥವಾ ಆಕೆಯನ್ನು ದೂಷಿಸದೆ ಬದಲಾಗಲು ಪ್ರೋತ್ಸಾಹಿಸಬೇಕು. ಮನೆಯವರು ಬಂಧು ಮಿತ್ರರು, ಸಹೋದ್ಯೋಗಿಗಳೂ ಒಟ್ಟಾಗಿ ಈ ಬದಲಾವಣೆಗೆ ಬೇಕಾದ ಪರಿಸರ ಮತ್ತು ಅವಕಾಶಗಳನ್ನು ಸೃಷ್ಟಿಸಬೇಕು. ವ್ಯಕ್ತಿ ಸಮಸ್ಯಾತ್ಮಕ ಮತ್ತು ಅಸಹಜ ಧೋರಣೆ ಮತ್ತು ವರ್ತನೆಗಳನ್ನು ತೋರಿಸದಂತೆ ಒತ್ತಾಸೆ ನೀಡಬೇಕು. ಬಹುಮಾನ, ಶ್ಲಾಘನೆ, ಶಿಸ್ತು, ಶಿಕ್ಷೆಗಳನ್ನು ಹದವಾಗಿ ಬೆರೆಸಿ ತರಬೇತಿ ನೀಡಬೇಕು. ಅಗತ್ಯ ಬಿದ್ದರೆ ಆಹ್ಲಾದಕರ ವಾತಾವರಣದಲ್ಲಿ ಸುಂದರ ಪರಿಸರದಲ್ಲಿಟ್ಟು ಅಗತ್ಯವಾದ ಬದಲಾವಣೆಗಳನ್ನು, ಸುಧಾರಣೆಗಳನ್ನು ತರಬೇಕು. ಈ ಬದಲಾವಣೆಯ ಕಾಲದಲ್ಲಿ ವ್ಯಕ್ತಿಗೆ ಪ್ರೀತಿ, ಸಹಾನುಭೂತಿಯೂ ಬೇಕು. ಹಾಗೆಯೆ ಕಠಿಣವಾದ ರೀತಿಯಲ್ಲಿ ಹೀಗೆ ಮಾಡು ಹಾಗೆ ಮಾಡು ಹೀಗೆ ಮಾಡಬೇಡ ಹಾಗೆ ಮಾಡಿದರೆ ಪರಿಣಾಮ ಚೆನ್ನಾಗಿರುವುದಿಲ್ಲ ಎಂದು ಹೇಳಿ ಅವರ ದೋಷಪೂರಿತ ನಡವಳಿಕೆಯ ನಿಯಂತ್ರಣವೂ ಬೇಕು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248